<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ತರೀಕೆರೆ</u>

<u>ಸಿ.ಸಿ. ನಂ.409/2014.</u>

ದಿನಾಂಕಃ08-07-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು
ಪಿ.ಡಬ್ಲ್ಯೂಃ2 ಸಿ.ಡಬ್ಲುಃ6

ಸಾಕ್ಷಿಯ ಹೆಸರು : ಗಿರೀಶ್
ತಂದೆಯ ಹೆಸರು : ಹನುಮಂತಪ್ಪ
ವಯಸ್ಸು : 34 ವರ್ಷ
ಉದ್ಯೋಗ : ಪಿ ಸಿ ಸಂ.114, ಅರಸೀಕೆರೆ ಪೊ.ಠಾಣೆ.
ವಾಸ : ಅರಸೀಕೆರೆ

**<u>ಮುಖ್ಯ ವಿಚಾರಣೆಃ</u>** ಮಾನ್ಯ ಸಸಅ ಅವರಿಂದಃ-

2011 ರಿಂದ 2022 ರವರೆಗೂ ಶಿವಮೊಗ್ಗ ರೈಲ್ವೆ ಪೊಲೀಸ್ ಠಾಣೆಯಲ್ಲಿ ನಾನು ಕರ್ತವ್ಯ ನಿರ್ವಹಿಸಿದ್ದೇನೆ.

2014 ನೇ ಇಸವಿಯಲ್ಲಿ ಮೈಸೂರು ರೈಲ್ವೆ ವ್ಯಾಪ್ತಿಯಲ್ಲಿ ಅಂದರೆ ಮೈಸೂರು ಶಿವಮೊಗ್ಗ ರೈಲು ಮಾರ್ಗದಲ್ಲಿ ಸುಲಿಗೆ ಮತ್ತು ಕಳವು ಪ್ರಕರಣಗಳು ರೈಲಿನಲ್ಲಿ ಹೆಚ್ಚಾಗುತ್ತಿದ್ದು ಅದಕ್ಕೆ ಸಂಬಂಧಪಟ್ಟಂತೆ ಚಾಸಾ 9 ರವರು ಆರೋಪಿಗಳನ್ನು ಪತ್ತೆ ಮಾಡಲು ಮತ್ತು ಸದರಿ ಸುಲಿಗೆ ಮತ್ತು ಕಳವು ಪ್ರಕರಣಗಳನ್ನು ತಡೆಯಲು ಒಂದು ತಂಡವನ್ನು ರಚಿಸಿದ್ದು ಸದರಿ ತಂಡದಲ್ಲಿ ಶಿವಮೊಗ್ಗ ವೃತ್ತದಿಂದ ನಾನು, ಚಾಸಾ 5, 7 ರವರು ಇದ್ದು ನಂತರ ಅರಸೀಕೆರೆ ರೈಲ್ವೆ ಪೊ.ಠಾಣೆಯಿಂದ ಗುರುಮೂರ್ತಿ, ಮಣಿಕಂಠ ಮತ್ತು ಮಂಜು ಎಂಬ ಪೊಲೀಸರನ್ನು ನಮ್ಮ ತಂಡಕ್ಕೆ ಸೇರಿಸಿದ್ದರು.

ನಮ್ಮ ತಂಡದೊಂದಿಗೆ ಚಾಸಾ 9 ರವರು ಅರಸೀಕೆರೆ ನಿಂದ ಬೀರೂರು ರೈಲ್ವೆ ಮಾರ್ಗದಲ್ಲಿ ಅನುಮಾನಸ್ಪದ ವ್ಯಕ್ತಿಗಳನ್ನು ರೈಲ್ವೆ ಬೋಗಿಗಳಲ್ಲಿ ವ್ಯಕ್ತಿಗಳ ಮೇಲೆ ನಿಗಾ ಇಡುತ್ತಿದ್ದು ನಂತರ ಮೈಸೂರು ಮತ್ತು ಶಿವಮೊಗ್ಗ ಇಂಟರ್ ಸಿಟಿ ರೈಲು ಗಾಡಿಯಲ್ಲಿ ಬೀರೂರು ರೈಲ್ವೆ ನಿಲ್ದಾಣದಲ್ಲಿಬಂದು ಇಳಿದಾಗ ಅಲ್ಲಿ ರೈಲ್ವೆ ಪ್ಲಾಟ್ ಪಾರ್ಮನಲ್ಲಿ ಒಬ್ಬ ವ್ಯಕ್ತಿಯು ನಮ್ಮನ್ನು ನೋಡಿ ಓಡಿ ಹೋಗಲು ಪ್ರಾರಂಬಿಸಿದ್ದು

ನಂತರ ಸದರಿ ವಕ್ತಿಯನ್ನು ನಾವುಗಳು ಹಿಡಿದುಕೊಂಡು ಬಂದಿರುತ್ತೇವೆ. ಸದರಿ ದಿನ ದಿಃ08.03.2014 ಆಗಿರುತ್ತದೆ. ನಂತರ ಸದರಿ ವ್ಯಕ್ತಿಯನ್ನು ಚಾಸಾ 9 ರವರ ಮುಂದೆ ಹಾಜರು ಪಡಿಸಿರುತ್ತೇವೆ. ಸದರಿ ವ್ಯಕ್ತಿಯನ್ನು ಹೆಚ್ಚಿನ ವಿಚಾರಣೆಗೆ ಶಿವಮೊಗ್ಗದ ನಮ್ಮ ರೈಲ್ವೆ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಸದರಿ ವ್ಯಕ್ತಿ ಚಾಸಾ 9 ರವರ ಮುಂದೆ ಆತನ ಸ್ವ-ಇಚ್ಚಾ ಹೇಳಿಕೆ ನೀಡಿರುತ್ತಾನೆ.

ಆರೋಪಿಯು ಆತನ ಹೇಳಿಕೆಯಲ್ಲಿ ದಿಃ23.01.2014 ರಂದು ತಾನು ಮತ್ತು ಇನ್ನಿಬ್ಬರು ವ್ಯಕ್ತಿಗಳೊಂದಿಗೆ ಕಡೂರಿನಿಂದ ಅರಸೀಕೆರೆಗೆ ಬಸ್ಸಿನಲ್ಲಿ ಹೋಗಿದ್ದು ಸದರಿ 3 ವ್ಯಕ್ತಿಗಳು ಶಿವಮೊಗ್ಗದ ಪ್ಯಾಸೆಂಜರ್ ರೈಲು ಗಾಡಿಯಲ್ಲಿ ಹತ್ತಿಕೊಂಡು ಬಂದಿದ್ದು ಶಿವಪುರದ ರೈಲ್ವೆ ನಿಲ್ದಾಣದಲ್ಲಿ ಸದರಿ ರೈಲು ನಿಂತಾಗ ಒಬ್ಬರು ಹೆಂಗಸು ಮಲಗಿದ್ದಾಗ ಆಕೆಯ ಕುತ್ತಿಗೆಯಿಂದ ಸರವನ್ನು ಕಿತ್ತುಕೊಂಡಿದ್ದು ಚಲಿಸುವ ರೈಲು ಗಾಡಿಯಿಂದ ಇಳಿದು ಓಡಿ ಹೋಗಿದ್ದು, ಅವರೊಂದಿಗೆ ಇತರ ಆರೋಪಿಗಳು ಸಹಃ ಓಡಿ ಹೋಗಿರುವುದಾಗಿ ತಿಳಿಸಿರುತ್ತಾರೆ. ನಂತರ ಸದರಿ ಸರವನ್ನು ಆಭರಣ ಅಂಗಡಿಗೆ ಮಾರಾಟ ಮಾಡಲು ಹೋದಾಗ ಸದರಿ ಸರ ಮಾಂಗಲ್ಯ ಸರ, ಗಿಲಿಟ್ ಸರವಾಗಿದ್ದು ತಾಳಿ ಮತ್ತು ಕಡ್ಡಿ ಚಿನ್ನದ್ದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ಸದರಿ ಗಿಲಿಟ್ ಸರವನ್ನು ಒಂದು ಚರಂಡಿಗೆ ಬೀಸಾಕಿರುವುದಾಗಿ ಹೇಳಿಕೆಯಲ್ಲಿ ತಿಳಿಸಿರುತ್ತಾನೆ. ನಂತರ ತಾಳಿ ಮತ್ತು ಕಡ್ಡಿ ಯನ್ನು ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿರುತ್ತಾನೆ. ನಾವು ಹಿಡಿದ ಆರೋಪಿತನ ಹೆಸರು ಹರೀಶ ಯಾನೆ ಡಾಂಬರ್ ಮತ್ತು ಇನ್ನಿಬ್ಬರು ಆರೋಪಿತರ ಹೆಸರು ಭಾಸ್ಕರ ಮತ್ತು ಹರೀಶ ಯಾನೆ ವೇಸ್ಟ್.

1 ನೇ ಆರೋಪಿಯನ್ನು ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ. 2 ಮತ್ತು 3 ನೇ ಆರೋಪಿತರನ್ನು ನಾನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಆರೋಪಿತರ ಪರ ವಕೀಲರು 2 ಮತ್ತು 3 ನೇಆರೋಪಿತರು ಗೈರು ಹಾಜರಿದ್ದು ಅವರ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

<u>**ಪಾಟೀ ಸವಾಲುಃ**</u> 3 ನೇ ಆರೋಪಿ ಪರ ಶ್ರೀ ಬಿ ಟಿ ಕೆ ವಕೀಲರಿಂದಃ-

ನಾನು ಚಾಸಾ 9 ರವರ ಮುಂದೆ ಮಾರ್ಚ್ ತಿಂಗಳಿನಲ್ಲಿ ನಾನು ಹೇಳಿಕೆ ನೀಡಿದ್ದು ಯಾವ ದಿನಾಂಕ ಎಂದು ನೆನಪಿಲ್ಲ. 3 ನೇ ಆರೋಪಿಯನ್ನು ಹಿಡಿದ ನಂತರ 1 ವಾರದ ಒಳಗೆ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಾನು ಆ ದಿನ ಕರ್ತವ್ಯ ನಿರ್ವಹಣೆ ಮಾಡಿದ್ದಕ್ಕೆ ಠಾಣೆಯಲ್ಲಿ ದಾಖಲೆ ಇದೆ. ನಾವು ಆರೋಪಿತನಿಗೆ ಹಿಡಿದಾಗ ಟಿಕೇಟ್ ಅನ್ನು ಕೇಳಿದ್ದು ಅವನು ಹಾಜರುಪಡಿಸಿರುವುದಿಲ್ಲ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಆರೋಪಿಯು ನಮ್ಮನ್ನು ನೋಡಿ ಅರಸೀಕೆರೆ ಕಡೆಗೆ ಓಡಿಹೋಗಿರುತ್ತಾನೆ. ಆರೋಪಿತನು ಆ ದಿನ ಯಾವ ಬಟ್ಟೆ ಧರಿಸಿದ್ದನು ಎಂದು ನೆನಪಿಲ್ಲ. ಆರೋಪಿಯು ತನ್ನ ಹೇಳಿಕೆಯನ್ನು ನೀಡಿದಾಗ ನಾನು ಇದ್ದೆ. ನನ್ನ ಸಹಿಯನ್ನು ಸದರಿಯವರ ಹೇಳಿಕೆಗೆ ಪಡೆದಿಲ್ಲ ಎಂದರೆ ಸರಿ. ಸದರಿ ಹೇಳಿಕೆಯನ್ನು ಯಾವ ಸಮಯದಲ್ಲಿ ನೀಡಿರುತ್ತಾರೆ ಎಂದರೆ ದಿಃ08.03.2014 ರಂದು ಮಧ್ಯಾಹ್ನ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಆರೋಪಿಯನ್ನು ಹಿಡಿದಾಗ ಸ್ಥಳದಲ್ಲಿ ಪಂಚನಾಮೆಯನ್ನು ಆ ತಕ್ಷಣ ಮಾಡಲಿಲ್ಲ ಎಂದರೆ ಸರಿ. ಸದರಿ ಸ್ಥಳದಲ್ಲಿದ್ದ ಸರ್ವಾಜನಿಕರ ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿ. ನಾನು ತಾಳಿ ಮತ್ತು ತಂತಿಯನ್ನು ನೋಡಿಲ್ಲ.

ಗುರುಮೂರ್ತಿ ಮತ್ತು ಮಣಿಕಂಠ ರವರ ವಿಚಾರಣೆ ಮಾಡಿ ಚಾಸಾ 9 ರವರು ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿ. ಆರೋಪಿಯು ನನ್ನ ಸಮಕ್ಷಮ ಹೇಳಿಕೆಯನ್ನು ಚಾಸಾ 9 ರವರಿಗೆ ಕೊಟ್ಟಿರುತ್ತಾರೆ ಮತ್ತು ಆರೋಪಿಯನ್ನು ನಾನು ಹಿಡಿದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸಿಬ್ಬಂದಿಗಳು ಗುಂಪಾಗಿ ಆರೋಪಿಯನ್ನು ಹಿಡಿದಿರುತ್ತೇವೆ. ನಾನು ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ಹಿಡಿದಿಲ್ಲ ಮತ್ತು ಆರೋಪಿ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** 1 ಮತ್ತು 2ನೇ ಆರೋಪಿತರ ಪರ ಶ್ರೀ ಹೆಚ್ ಸಿಎಸ್ ವಕೀಲರಿಂದಃ-

1 ಮತ್ತು 2ನೇ ಆರೋಪಿತರು ಆ ಸಮಯದಲ್ಲಿ ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಅವರನ್ನು ಸ್ಥಳದಲ್ಲಿ ನೋಡಲಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಸಂತೋಷ ಕುಮಾರ ಪಿ ಎಸ್)
ಸಿವಿಲ್ ನ್ಯಾಯಾಧೀಶರು ಮತ್ತು
ಹೆ.ಪ್ರಃದಃನ್ಯಾಃದಂ.,ರವರು, ತರೀಕೆರೆ.